ಭಾನುವಾರ, ಮಾರ್ಚ್ 26, 2017 | ಮಂಗಳೂರು | ₹ 5.00 | ಪುಟ 26 + 2 | ಸಂಪುಟ 20 | ಸಂಚಿಕೆ 85
goo.gl/562nF1 f/prajavani.net @prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೀರಿನ ಘಟಕಕ್ಕಿನ್ನು 'ದೇವರಾಜ ಅರಸು' ಹೆಸರು 4
ಸನ್ಮಾನ್ಯ ಸಭಾಧ್ಯಕ್ಷರೇ ನಮ್ಮನ್ನು ಜೈಲಿಗೆ ಕಳುಹಿಸಿಬಿಡಿ 7





ಮುಕ್ತಛಂದ



ಮೊರಾದಾಬಾದ್‌ನಲ್ಲಿ 60ನೇ 'ಅರ್ಥ್‌ಅವರ್' ಸಂದೇಶ ಸಾ



## ಸಹ್ಯಾದ್ರಿ 'ಚಾಲೆಂಜರ್ಸ್' ತಂಡಕ್ಕೆ ಪ್ರಶಸ್ತಿ

# ವಿಮಾನ ಮಾದರಿ ವಿನ್ಯಾಸ

• ಡಿ.ಕೆ.ಬಸವರಾಜು

**ಕ್ಯಾಂಪಸ್**

**ಕರಾವಳಿಯೂ** ಶಿಕ್ಷಣ ಹಾಗೂ ಪ್ರವಾಸೋದ್ಯಮಕ್ಕೆ ಹೆಸರು ವಾಸಿ. ಇಲ್ಲಿರುವ ಕಾಲೇಜುಗಳ ಅನೇಕ ಯುವ ಪ್ರತಿಭೆಗಳು ತಾಂತ್ರಿಕ ಕ್ಷೇತ್ರದಲ್ಲಿ ವಿವಿಧ ಸಾಧನೆಗಳ ಮೂಲಕ ಪ್ರಸಿದ್ಧಿ ಪಡೆದಿದ್ದಾರೆ. ಅಂತಹವುಗಳಲ್ಲಿ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಕೂಡಾ ಒಂದು.

ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನ ಚಾಲೆಂಜರ್ಸ್ ತಂಡ ಫೋರ್ಟ್ ವರ್ತ್, ಟೆಕ್ಸಾಸ್, ನಡೆದ ಎಸ್‌ಎಇ ಅಂತರ ರಾಷ್ಟ್ರೀಯ ಏರೋ ಡಿಸೈನ್ ವೆಸ್ಟ್ 2017ರ ಸಾಲಿನ ಮೈಕ್ರೋ ವರ್ಗದಲ್ಲಿ ಆರನೇ ಸ್ಥಾನ ಪಡೆದಿದ್ದಾರೆ. ಸಹ್ಯಾದ್ರಿ ಕಾಲೇಜ್ ಚಾಲೆಂಜರ್ಸ್ ತಂಡದ ಸದಸ್ಯರಾದ ಪ್ರೊಬಿಡ್ ಜೆ. ಪಣಿಕ್ಕನ್, ಗೆರಾಲ್ಡ್ ಕೆ ಆಂಟನಿ, ಗೌಸ್ ಖಾನ್, ಅಮೃತಾ ಖಂದರೆ, ಮಿದುನ್ ಜ್ಯೋತೀಸ್, ಪ್ರಣಮ್ಯ, ಶಿಲ್ಪಾ, ಶ್ವೇತಾ ಮತ್ತು ಮೊಹಮ್ಮದ್ ಅನ್ವರ್ ಇತರರು ತಂಡದಲ್ಲಿ ಇದ್ದರು. ಎಸ್‌ಎಇ ಅಂತರರಾಷ್ಟ್ರೀಯ ಏರೋಡಿಸೈನ್ ಸ್ಪರ್ಧೆಯಲ್ಲಿ ವಿಶ್ವದ ವಿವಿಧ ದೇಶಗಳ 75 ತಂಡಗಳು ಭಾಗವಹಿಸಿದ್ದವು.

ಕಾಲೇಜಿನ ಚಾಲೆಂಜರ್ಸ್ ತಂಡವು 2013ರಲ್ಲಿ ಮೊಹಮ್ಮದ್ ಅನ್ವರ್ ಸ್ಥಾಪಿಸಿದ್ದು, ವಿವಿಧ ಕಾಲೇಜುಗಳ ಎಂಜಿನಿಯರ್ ವಿಭಾಗದ 65 ಸದಸ್ಯರು ಈ ತಂಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಏರೊಮಾಡೆಲಿಂಗ್, ರೊಬೊಟಿಕ್ಸ್ ಹಾಗೂ ಎಂಜಿನಿಯರ್ ಮಾದರಿಗಳ ವಿನ್ಯಾಸಗಳನ್ನು ರೂಪಿಸಲು ಒತ್ತು ನೀಡಿದ್ದು, ಅಮೆರಿಕಾದ ಫ್ಲೊರಿಡಾ, ಟೆಕ್ಸಾಸ್‌ಗಳಲ್ಲಿ ಎಸ್‌ಎಇ ಏರೋಡಿಸೈನ್, ಯುಎಸ್‌ಎ ಹಾಗೂ ಚೀನಾದಲ್ಲಿ ನಡೆದ ಅಂತರರಾಷ್ಟ್ರೀಯ ಏರಿಯಲ್ ರೊಬೊಟಿಕ್ಸ್ ಹಾಗೂ ವಿವಿಧ ಐಐಟಿ ಹಾಗೂ ಎನ್‌ಐಟಿಗಳಲ್ಲಿ ನಡೆದ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ. ಕಳೆದ ವರ್ಷ 10ನೇ ಎಸ್‌ಎಇ ಏರೋಡಿಸೈನ್ ಸ್ಪರ್ಧೆಯಲ್ಲಿ ಚಾಲೆಂಜರ್ಸ್ ತಂಡವು ಬಹುಮಾನ ಪಡೆದಿದೆ.

ವಿದ್ಯಾರ್ಥಿಗಳು ತಮ್ಮ ಗುರಿ ಮುಟ್ಟಲು ಬೇಕಾದಂತಹ ಸಮೂಹ ಕ್ರಿಯಾತ್ಮಕ ಉತ್ಸಾಹ ಮೂಡಿಸುವುದು ಈ ತಂಡದ ಮುಖ್ಯ ಗುರಿಯಾಗಿದ್ದು, ಯುವ ಮನಸ್ಸುಗಳಿಗೆ ಉತ್ಸಾಹ ಹಾಗೂ ಶಕ್ತಿ ಮೂಡಿಸುವುದು, ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸುವುದು, ವಿದ್ಯಾರ್ಥಿಗಳ ಯಶಸ್ಸಿಗೆ ದಾರಿ ದೀಪವಾಗುವುದು ಹಾಗೂ ಯಶಸ್ಸಿಗೆ ಬೇಕಾದ ಅವಕಾಶಗಳನ್ನು ಸೃಷ್ಟಿಸುವುದು ತಂಡದ ಮುಖ್ಯ ಉದ್ದೇಶ. ಈ ತಂಡವು ಬಾಬಾ ಅಣುಶಕ್ತಿ ಸಂಶೋಧನಾ ಕೇಂದ್ರ ಹಾಗೂ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಅನುದಾನದಲ್ಲಿ ಹಲವು ಮಾದರಿ ತಯಾರಿಸಿದೆ.

ಈ ಚಾಲೆಂಜರ್ಸ್ ತಂಡವು ಏಪ್ರಿಲ್ 2017ರ ತಿಂಗಳಲ್ಲಿ ಅಮೆರಿಕದ ಫ್ಲೋರಿಡಾದಲ್ಲಿ ನಡೆಯುವ ಎಸ್‌ಎಇ ಅಂತರ ರಾಷ್ಟ್ರೀಯ ಏರೋಡಿಸೈನ್ ಈಸ್ಟ್‌ನಲ್ಲಿ ಕೂಡ ಭಾಗವಹಿಸಲಿದೆ.

**ಉತ್ಕೃಷ್ಟತೆಗೆ ವೇದಿಕೆ:**

ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಬರೇ ಪದವೀಧರರನ್ನು ಮಾತ್ರ ರೂಪಿಸುವ ಕಾರ್ಯದಲ್ಲಿ ನಿರತವಾಗಿಲ್ಲ. ಉತ್ಕೃಷ್ಟ ಸಾಧನೆಗೆ ಭದ್ರ ವೇದಿಕೆ ಒದಗಿಸಿ ಅವರಿಗೆ ಯಶಸ್ವಿ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಿ ಕೊಡುವಲ್ಲಿ ನಿರತವಾಗಿದೆ. ಶಿಕ್ಷಣದ ಜತೆಗೆ ವಿದ್ಯಾರ್ಥಿಗಳಲ್ಲಿ ಸಂಶೋಧನೆಗೆ ಪ್ರೇರಣೆ, ಉದ್ಯಮಶೀಲತೆ ಯನ್ನು ಪ್ರೋತ್ಸಾಹಿಸಿ ಯಶಸ್ವಿ ಸಾಧಕರನ್ನಾಗಿ ರೂಪಿ ಸುವುದು, ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಮುಖ್ಯ ಉದ್ದೇಶ. ಇದನ್ನು ಸಾಕಾರಗೊಳಿಸುವ ದಿಸೆಯಲ್ಲಿ ಶಿಕ್ಷಣದ ಜತೆಗೆ ಯಶಸ್ವಿ ಹಾಗೂ ಹೆಸರಾಂತ ಸಿಇಒ, ಸಿಒಒಗಳು, ಕೈಗಾರಿಕೋದ್ಯಮಿಗಳನ್ನು ಶಿಕ್ಷಣ ಸಂಸ್ಥೆಗೆ ಆಹ್ವಾನಿಸಿ ಅವರಿಂದ ಪ್ರೇರೇಪಣಾ ಉಪನ್ಯಾಸ ಆಯೋಜಿಸುತ್ತಾ ಬರುತ್ತಿರುವುದು ಸಂಸ್ಥೆಯ ವೈಶಿಷ್ಟ್ಯ.

ಸಂಸ್ಥೆಯ ಅಧ್ಯಕ್ಷ ಅಧ್ಯಕ್ಷ ಡಾ. ಮಂಜುನಾಥ್ ಭಂಡಾರಿ, ಪ್ರಾಂಶುಪಾಲ ಡಾ.ಉಮೇಶ್ ಎಂ.ಭೂಷಿ ಹಾಗೂ ಆಡಳಿತ ವರ್ಗ ವಿದ್ಯಾರ್ಥಿಗಳನ್ನು ಅಭಿನಂದಿಸಿದೆ.

'ಚಾಲೆಂಜರ್ಸ್ ತಂಡವು ವಿಮಾನ ಮಾದರಿ, ರೊಬೊಟಿಕ್ಸ್ ಹಾಗೂ ಎಂಜಿನಿಯರ್ ಮಾಡೆಲ್‌ಗಳನ್ನು ವಿನ್ಯಾಸಗೊಳಿಸುವ ಕಾರ್ಯದಲ್ಲಿ ತೊಡಗಿದ್ದು, ಸಹ್ಯಾದ್ರಿ ಕಾಲೇಜು ಮಾತ್ರವಲ್ಲದೆ ಇತರೆ ಕಾಲೇಜುಗಳ ವಿದ್ಯಾರ್ಥಿಗಳು ನಮ್ಮ ತಂಡದಲ್ಲಿ ಇದ್ದಾರೆ' ಎನ್ನುತ್ತಾರೆ ಚಾಲೆಂಜರ್ಸ್ ತಂಡದ